ಪ್ರವಾಸ



ದುಶಾಂಬೆಯ ಮುಖ್ಯ ಚೌಕದಲ್ಲಿರುವ ಇಸ್ಮಾಯಿಲ್ ಸೋಮಾನಿಯ ಪ್ರತಿಮೆ

# ಪಾಮಿರ್ ದಾರಿಯಲ್ಲಿ ಸೈಕಲ್ ಚಾರಣ

ಹಿಮಾಲಯ, ನೇಪಾಳ ಮತ್ತು ಐಸ್‌ಲ್ಯಾಂಡ್ ದೇಶಗಳ ಸೈಕಲ್ ಪ್ರವಾಸದ ಬಳಿಕದ ಸೈಕಲ್ ಚಾರಣಕ್ಕೆ ನಾನು ಆಯ್ದುಕೊಂಡದ್ದು ಪಾಮಿರ್ ಹೆದ್ದಾರಿ. ಮಧ್ಯ ಏಷ್ಯಾದ ದೇಶಗಳಲ್ಲಿ ಒಂದಾದ ತಜಕಿಸ್ತಾನದಲ್ಲಿರುವ ಈ ದುರ್ಗಮ ಹೆದ್ದಾರಿ, ಜಗತ್ತಿನಲ್ಲೇ ಅತ್ಯಂತ ಎತ್ತರದ ಎರಡನೇ ಅಂತರರಾಷ್ಟ್ರೀಯ ಹೆದ್ದಾರಿ ಎಂಬ ಖ್ಯಾತಿ ಹೊಂದಿದೆ. (ಮೊದಲನೆಯದು ಪಾಕಿಸ್ತಾನ ಮತ್ತು ಚೀನಾ ನಡುವಿರುವ ಖುಜಿರಾಬ್ ಹೆದ್ದಾರಿ). ರುದ್ರರಮಣೀಯ ಹಾಗೂ ದಂಗು ಬಡಿಸುವ ದೃಶ್ಯಾವಳಿಗಳ ನಡುವೆ ಸಾಗುವ ಈ ಪ್ರಯಾಸದ ದಾರಿ, ಯಾವುದೇ ಪ್ರವಾಸಿಗರ ಸಾಹಸ, ಸಹನೆ, ಸಾಮರ್ಥ್ಯಕ್ಕೆ ಸವಾಲೇ ಸರಿ.

ತಜಕಿಸ್ತಾನದ ರಾಜಧಾನಿ ದುಶಾಂಬೆಯಿಂದ ಹೊರಟು ಖೊರೋಗ್, ಮುರ್‌ಗಾಬ್, ಸಾರಿತಾಶ್ ಪಟ್ಟಣಗಳ ಮೂಲಕ ಹಾದು, ನೆರೆಯ ದೇಶವಾದ ಕಿರ್ಗಿಸ್ತಾನದ ಓಶ್ ನಗರದಲ್ಲಿ ಕೊನೆಗೊಳ್ಳುವ 1150 ಕಿ.ಮೀ. ದೂರದ ಈ ಹೆದ್ದಾರಿಯನ್ನು ಸೈಕಲಿನಲ್ಲಿ ಕ್ರಮಿಸಲು ನನಗೆ ತಗುಲಿದ್ದು ಮೂವತ್ತು ದಿನಗಳು! ಈ ಕಠಿಣ ಪ್ರವಾಸಕ್ಕೆ ಬೇಕಾದ ಎಲ್ಲ ತಯಾರಿ ಮಾಡಿಕೊಂಡು, ವಿಮಾನದಲ್ಲಿ ಸೈಕಲ್ ಸಮೇತ್, ಬೆಂಗಳೂರಿನಿಂದ ದಿಲ್ಲಿ ಮೂಲಕ ದುಶಾಂಬೆಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿದಾಗ, ಮುಂದಿನ ದಿನಗಳ ನಿಸರ್ಗದ ಚಮತ್ಕಾರಗಳಿಗೆ ಮುನ್ನುಡಿಯೋ ಎಂಬಂತೆ ಎದುರಾದುದು, ನನ್ನ ಕರಾವಳಿ ಊರು ನೆನಪಿಸುವ ಧಾರಾಕಾರ ಮಳೆ.

## ಸಾವಧಾನದ ನಗರ ದುಶಾಂಬೆ

ರೋಮಿಚ್ ಮತ್ತು ಶಿರ್‌ಕೆಂಟ್ ಪರ್ವತ ಶ್ರೇಣಿಗಳಿಂದ ಸುತ್ತುವರಿದು, ನಡುವಿನ ಹಿಸ್ಸೊರ್ ಕಣಿವೆಯಲ್ಲಿ ವಿಸ್ತಾರವಾಗಿ ಹರಡಿಕೊಂಡ ದುಶಾಂಬೆ ನಿಧಾನಗತಿಯ ಆರಾಮ ನಗರ. ಪರ್ಷಿಯನ್, ರಷ್ಯನ್ ವಾಸ್ತು ಶೈಲಿಯ ಹಳೆಯಹೊಸ ಕಟ್ಟಡಗಳು, ಸಾಲುಮರಗಳಿಂದ ಅಲಂಕೃತವಾದ ಉದ್ದನೆಯ ಬೀದಿಗಳು, ಅಚ್ಚುಕಟ್ಟಾಗಿ ಕಂಗೊಳಿಸುವ ಉದ್ಯಾನವನಗಳು, ಸದಾ ಚಟುವಟಿಕೆಯ ಸ್ಥಳೀಯ ಮಾರ್ಕೆಟ್‌ಗಳು, ವಿಶಾಲವಾದ ಚೌಕಗಳು ಮತ್ತು ಆ ಚೌಕಗಳಲ್ಲಿ ಹರಡಿಕೊಂಡ ಹತ್ತು ಹಲವು 'ಚಾಯ್‌ಖಾನೆ'ಗಳು, ತಂಪಾದ ಸಂಜೆಗಳಲ್ಲಿ ಆ ಚಾಯ್‌ಖಾನ್‌ಗಳಲ್ಲಿ ಕುಡಿಕೆಗಟ್ಟಲೆ ಚಹಾ ಹೀರುತ್ತಾ ಬಂಧು ಮಿತ್ರರೊಟ್ಟಿಗೆ ನಗುತ್ತಾ ಹರಟುತ್ತಾ ಸಮಯ ಕಳೆಯುವ ಸ್ಥಳೀಯರು ಇವೆಲ್ಲ ಆ ನಗರದ ಗಮನಾರ್ಹ ಸಾಮಾಜಿಕ ಮತ್ತು ನಾಗರಿಕ ಗುರುತುಗಳು.

ಹಲವು ದಶಕಗಳ ಕಾಲ ರಷ್ಯನ್ ಸರ್ವಾಧಿಕಾರಕ್ಕೆ ತುತ್ತಾಗಿ 1990ರಲ್ಲಿ ತಂತ್ರವಾದ ತಜಕಿಸ್ತಾನ,